ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಓಎಸ್ 151/2018 ಪಿಡಬ್ಲ್ಯೂ-1

ದಿನಾಂಕಃ 27-06-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1, 4 ಮತ್ತು 6 ನೇ ಪ್ರತಿವಾದಿಯರ ಪರ ಮಾನ್ಯ ಶ್ರೀ.ಪಿಎಂ ವಕೀಲರಿಂದಃ-**

ನಾನು ಪಿಯುಸಿ ವರೆಗೂ ವಿದ್ಯಾಬ್ಯಾಸ ಮಾಡಿದ್ದೇನೆ. ನಾನು ಈಗ ಚಾಯಗ್ರಾಹಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ವ್ಯವಸಾಯ ಮಾಡುತ್ತಿಲ್ಲ. ನನ್ನ ತಾತನ ಹೆಸರು ಪುಟ್ಟಲಿಂಗೇಗೌಡ. ಪುಟ್ಟಲಿಂಗೇಗೌಡ ರವರಿಗೆ ಒಟ್ಟು 7 ಜನ ಮಕ್ಕಳಿದ್ದು, 3 ಹೆಣ್ಣು ಮತ್ತು 4 ಜನ ಗಂಡು ಮಕ್ಕಳು. ಪುಟ್ಟಲಿಂಗೇಗೌಡ ರವರಿಗೆ ನನ್ನ ತಂದೆ 2 ನೇ ಮಗನಾಗಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳ ತಂದೆಯಾದ ಲಿಂಗಪ್ಪ ರವರು ಪುಟ್ಟಲಿಂಗೇಗೌಡ ರವರ ಮೊದಲ ಮಗನಾಗಿರುತ್ತಾರೆ. ಪ್ರತಿವಾದಿ 3, 5 ಮತ್ತು 7 ರವರನ್ನು ಒಟ್ಟು ಕುಟುಂಬದಲ್ಲಿದ್ದಾಗ ಮದುವೆ ಮಾಡಲಾಗಿತ್ತು. ನನ್ನ ತಂದೆ ಯಾವಾಗ ವಿವಾಹವಾಗಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆ 1980 ರಲ್ಲಿ ವಿವಾಹವಾಗಿರಬಹುದು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಜೊತೆಗೆ 1 ಮತ್ತು 2 ನೇ ಪ್ರತಿವಾದಿಯ ತಂದೆ, ಪ್ರತಿವಾದಿ 3 ರಿಂದ 7 ರವರು ಒಟ್ಟು ಕುಟುಂಬದಲ್ಲಿದ್ದರು ಎಂದರೆ ಸರಿ.1983 ರಲ್ಲಿ ನನ್ನ ತಂದೆ ಕುಟುಬಂದಲ್ಲಿ ಕಲಾಹ ಉಂಟಾಗಿದ್ದರಿಂದ ನಮ್ಮ ಭಾಗಕ್ಕೆ ಬರಬೇಕಾದ ಆಸ್ತಿಯನ್ನು ಪಡೆದು ಹೊರ ಬಂದಿರುತ್ತಾರೆಂದರೆ ಸರಿಯಲ್ಲ. ಪ್ರತ್ಯೇಕ ಸ್ವಾದೀನದಲ್ಲಿ ತಮಗೆ ಬಂದ ಆಸ್ತಿಯಲ್ಲಿ ಸ್ವಾದೀನದಲ್ಲಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟು 5 ವರ್ಷವಾಗಿರುತ್ತದೆ. ನನ್ನ ದೊಡ್ಡಪ್ಪ ಲಿಂಗಪ್ಪ ರವರು ಮೃತಪಟ್ಟು 7 ವರ್ಷವಾಗಿರುತ್ತದೆ. ಲಿಂಗಪ್ಪ ರವರು 2007 ನೇ ಇಸವಿಯಲ್ಲಿ ಮೃತಪಟ್ಟಿರುತ್ತಾರೆಂದರೆ ಸರಿ. ಲಿಂಗಪ್ಪ ರವರಿಗೆ ಬಂದ ಪಾಲಿನ ಆಸ್ತಿಯಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಮತ್ತು ಅವರ ತಾಯಿ ಪ್ರತ್ಯೇಕ ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ.

**ಈ ಹಂತದಲ್ಲಿ 1, 4 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

**ಸಾಕ್ಷಿಯ ಸಹಿಃ**